

ಅದೊಂದು ಮಕ್ಕಳ ವಸತಿ ಶಾಲೆ. ಊಟವಾದ ಮೇಲೆ ಹಣ್ಣು ಕೊಡುವ ಪದ್ಧತಿ ಇತ್ತು. ಒಂದೆಡೆ ಸೇಬುಗಳನ್ನು ಇಟ್ಟು ಒಂದು ಚೀಟಿಯನ್ನು ಅಂಟಿಸಿದ್ದರು: 'ಒಂದು ಸೇಬನ್ನು ಮಾತ್ರ ತೆಗೆದುಕೊಳ್ಳಿ, ದೇವರು ನೋಡುತ್ತಿದ್ದಾನೆ.'

ಇನ್ನೊಂದೆಡೆ ಚಾಕಲೇಟುಗಳನ್ನು ಇಟ್ಟು ಅಲ್ಲಿ ಏನನ್ನೂ ಬರೆದಿರಲಿಲ್ಲ. ಅಲ್ಲಿಗೆ ಬಂದ ಒಬ್ಬ ಹುಡುಗ ಒಂದು ಚೀಟಿ ಬರೆದಿಟ್ಟನು. 'ಎಷ್ಟು ಬೇಕಾದರೂ ಚಾಕಲೇಟು ತೆಗೆದುಕೊಳ್ಳಿ, ದೇವರು ಸೇಬುಗಳನ್ನು ಕಾಯುತ್ತಿದ್ದಾನೆ!'

★★★

ಒಂದು ಕಡೆ ಅಪಘಾತ ಸಂಭವಿಸಿತ್ತು. ಇದನ್ನು ನೋಡಲು ಜನ ಸುತ್ತುವರಿದ್ದರು. ಅಲ್ಲಿಗೆ ಬಂದ ಪತ್ರಕರ್ತ, ದಾರಿ ಕಾಣದೆ, ದಾರಿ ಬಿಡಿ, ಸತ್ತಿರುವವರು ನಮ್ಮ ಸಂಬಂಧಿಕರು.' ಎಂದ

ಜನ ದಾರಿ ಮಾಡಿಕೊಟ್ಟರು. ಪತ್ರಕರ್ತ ಹೋಗಿ ನೋಡಿದಾಗ, ಅಲ್ಲಿ ಸತ್ತುಬಿದ್ದಿತ್ತು ಒಂದು ಕತ್ತೆ!

(ಸಂಗ್ರಹ)ಶಂಕರೇಗೌಡ ತುಂಬಕೆರೆ, ಮಂಡ್ಯ



**ಈ ಲಾಜಿಕ್ ಪ್ರಶ್ನೆಗಳಿಗೆ ಉತ್ತರಿಸಿ!**

1. ಕುದುರೆಗೆ ಯಾವಾಗ 6 ಕಾಲುಗಳು ಇರುತ್ತವೆ?
2. ನಿಮ್ಮ ದುಡ್ಡನ್ನು ಹೇಗೆ ದ್ವಿಗುಣ ಮಾಡಬಹುದು?
3. ಒಂದು ಮನೆಯೂ ಇಲ್ಲದ ದೊಡ್ಡ ದೊಡ್ಡ ನಗರಗಳನ್ನು ಎಲ್ಲಿ ನೋಡಬಹುದು?
4. ಯಾವಾಗ ಭಾನುವಾರದ ಮುಂಚೆ ಸೋಮವಾರ ಬರುತ್ತದೆ?

**ಉತ್ತರಗಳು**

1. ಒಬ್ಬ ವ್ಯಕ್ತಿ ಕುದುರೆ ಸವಾರಿ ಮಾಡುವಾಗ
2. ದುಡ್ಡನ್ನು ಹಿಡಿದು ಕನ್ನಡಿ ಮುಂದೆ ನಿಂತಾಗ
3. ಭೂಪಟದಲ್ಲಿ
4. ಇಂಗ್ಲಿಷ್ ನಿಘಂಟಿನಲ್ಲಿ

(ಸಂಗ್ರಹ) ಕದಲಗೆರೆ ಜೆ.ಜಯರಾಮು, ಶ್ರೀರಂಗಪಟ್ಟಣ



ಹೆಡ್ ಲೈಟ್ ಇಲ್ಲದೇ ಗಾಡಿ ಓಡಿಸುತ್ತಿದ್ದ ಗುಂಡನನ್ನು ಪೊಲೀಸರು ತಡೆದರು.
'ಏನಪ್ಪಾ.. ಹೆಡ್‌ಲೈಟ್ ಹಾಕಿಲ್ಲ?'
ಗುಂಡ: ಇಷ್ಟು ಒಳ್ಳೇ ಬೆಳದಿಂಗಳಿದೆ. ಯಾಕ್ಸಾರ್ ಹೆಡ್‌ಲೈಟು?
ಪೊಲೀಸರು ಗುಂಡನ ಬೈಕ್‌ನ ಎರಡೂ ಚಕ್ರದ ಗಾಳಿ ತೆಗೆದರು.
'ಸರಿ ಹೋಗಪ್ಪಾ.. ಸುತ್ತ ಮುತ್ತ ಒಳ್ಳೇ ಗಾಳಿ ಇದೆ.. ಚಕ್ರದಲ್ಲಿ ಯಾಕೆ ಗಾಳಿ..' ಎಂದರು!

★★★

**ರೈಲಿನಲ್ಲಿ ನಿದ್ದೆ**

ಸಂತಾ: ನಿನ್ನೆ ಇಡೀ ರಾತ್ರಿ ರೈಲಿನಲ್ಲಿ ನನಗೆ ನಿದ್ದೆಯೇ ಬರಲಿಲ್ಲ.
ಬಂತಾ: ಹೌದಾ, ಯಾಕೆ?
ಸಂತಾ: ನಂಗೆ ಮೇಲಿನ ಬರ್ತ್ ಸಿಕ್ಕಿತ್ತು, ಅದಕ್ಕೇ!
ಬಂತಾ: ಹಾಗಾದರೆ ನೀನು ಕೆಳಗಿನ ಬರ್ತ್‌ನಲ್ಲಿ ಇದ್ದವರನ್ನು ಮೇಲೆ ಮಲಗಲು ಹೇಳಬಹುದಿತ್ತಲ್ಲಾ?
ಸಂತಾ: ಹಾಗೇ ಅನ್ಕೊಂಡೆ. ಆದರೆ ಕೆಳಗಿನ ಬರ್ತ್‌ನಲ್ಲಿ ಯಾರೂ ಇರಲಿಲ್ಲ..

ಸಂಗ್ರಹ: ವಿದ್ಯಾ ವಿ ಹಾಲಭಾವಿ